# ತುಮಕೂರು ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು

**ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816-2260220**


ಸಂಖ್ಯೆ:ವಿವಿಕಾತು:2021–22: ದಿನಾಂಕ:14.09.2021

## : ಪ್ರವೇಶಾತಿ ಸೂಚನೆ :

----

ಆನ್‌ಲೈನ್ ಮೂಲಕ ಬಿ.ಎಸ್ಸಿ ಮತ್ತು ಬಿ.ವೋಕ್ ಪದವಿಗಳಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದನ್ವಯ ಕೆಳಕಂಡ ವಿವರಗಳನ್ನೊಳಗೊಂಡ ದಿನಾಂಕಗಳಂದು ಬೆಳಗ್ಗೆ 9.30 ಕ್ಕೆ ಕಾಲೇಜಿನ ಮುಖ್ಯದ್ವಾರದಲ್ಲಿ ನೋಂದಣಿ ಮಾಡಿಸಿಕೊಂಡು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಆವರಣದಲ್ಲಿರುವ ಡಾ. ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಈ ಕೆಳಕಂಡ ದಾಖಲೆಗಳ ಮೂಲ ಪ್ರತಿಗಳೊಂದಿಗೆ ಮೂರು ಸೆಟ್ ಜೆರಾಕ್ಸ್ ಪ್ರತಿಗಳನ್ನು ದೃಢೀಕರಿಸಿ ಹಾಜರುಪಡಿಸುವುದು.

1. ಪ್ರಾಂಶುಪಾಲರಿಂದ ದೃಢೀಕರಿಸಿರುವ ಅರ್ಹತಾ ಪರೀಕ್ಷೆ (ಪಿ.ಯು.ಸಿ) ಅಂಕಪಟ್ಟಿ/ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.
2. ಹಿಂದೆ ವ್ಯಾಸಂಗ ಮಾಡಿದ ಕಾಲೇಜು ನೀಡಿದ ನಡತೆ ಪ್ರಮಾಣ ಪತ್ರ / ವರ್ಗಾವಣೆ ಪತ್ರ (ಟಿ.ಸಿ) (ನೀಡಿದ್ದ ಪಕ್ಷದಲ್ಲಿ)
3. ಜನ್ಮ ದಿನಾಂಕ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ.
4. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರಿಗೆ)
5. ಹೈದರಾಬಾದ್-ಕರ್ನಾಟಕ 371(ಜೆ) ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
6. ವಿಕಲಚೇತನ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರ.
7. ಇತರೆ ಮೀಸಲಾತಿ ಬಯಸುವವರು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಲಗತ್ತಿಸುವುದು.
8. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 3 ಭಾವಚಿತ್ರಗಳು.
9. ಆಧಾರ್ ಗುರುತಿನ ಚೀಟಿ.
10. ವಿದ್ಯಾರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.

| ಅಂತಿಮ ಜ್ಯೇಷ್ಠತಾ ಪಟ್ಟಿ ಕ್ರ.ಸಂ | ಕೌನ್ಸಲಿಂಗ್ ದಿನಾಂಕ | ಕೋರ್ಸ್ |
|---|---|---|
| 1 ರಿಂದ 300 | 16.09.2021 | ಬಿ.ಎಸ್ಸಿ |
| 301 ರಿಂದ 600 | 18.09.2021 | ಬಿ.ಎಸ್ಸಿ |
| 601 ರಿಂದ 900 | 21.09.2021 | ಬಿ.ಎಸ್ಸಿ |
| 901 ರಿಂದ 1226 | 23.09.2021 | ಬಿ.ಎಸ್ಸಿ |
| – | 23.09.2021 | ಬಿ.ವೋಕ್ |



ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103
15/9/21

Scanned with CamScanner

**ವಿಶೇಷ ಸೂಚನೆ:**

1. ಪ್ರವೇಶ ಸಂದರ್ಭದಲ್ಲಿ ವಿದ್ಯಾರ್ಥಿಯ ಜೊತೆ ತಂದೆ/ಪೋಷಕರು ಖುದ್ದಾಗಿ ಹಾಜರಾಗಿ ಅಗತ್ಯವಾದ ದಾಖಲೆಗಳಿಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿ ಸಹಿಯನ್ನು ಮಾಡುವುದು ಕಡ್ಡಾಯವಾಗಿರುತ್ತದೆ.
2. ಪ್ರವೇಶ ಶುಲ್ಕದ ವಿವರಗಳನ್ನು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ವೆಬ್‌ಸೈಟ್ / ಕಾಲೇಜಿನ ಸೂಚನಾ ಫಲಕದಲ್ಲಿ ನೋಡಬಹುದಾಗಿದೆ.
3. ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ತಕ್ಷಣವೇ ಪ್ರವೇಶಾತಿ ಶುಲ್ಕವನ್ನು ವಿಜ್ಞಾನ ಕಾಲೇಜಿನ ವೆಬ್‌ಸೈಟ್ www.ucst.ac.in ನಲ್ಲಿ ಲಿಂಕ್ ಆಗಿರುವ SBI Collect ಮೂಲಕ ಆನ್‌ಲೈನ್‌ನಲ್ಲಿ ಪಾವತಿಸುವುದು.
4. ಪ್ರವೇಶಾತಿ ಶುಲ್ಕ ಪಾವತಿಸಿದ ನಂತರ ಮೂಲ ರಶೀದಿಯೊಂದಿಗೆ ಕಾಲೇಜಿನ ಕಚೇರಿಯ ಪ್ರವೇಶಾತಿ ವಿಭಾಗದಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಹಾಗೂ ರಶೀದಿಯ ಒಂದು ಪ್ರತಿಯನ್ನು ವಿದ್ಯಾರ್ಥಿಗಳು ತಮ್ಮ ಬಳಿಯೇ ಇರಿಸಿಕೊಳ್ಳುವುದು.
5. ವಿದ್ಯಾರ್ಥಿಗಳು ತಪ್ಪು ಮಾಹಿತಿ ನೀಡಿರುವುದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಮುನ್ಸೂಚನೆ ಇಲ್ಲದೆ ಪ್ರವೇಶವನ್ನು ರದ್ದುಪಡಿಸಲಾಗುವುದು. ಅಂತಹ ವಿದ್ಯಾರ್ಥಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು.
6. **ವಿದ್ಯಾರ್ಥಿಗಳು ಮತ್ತು ಪೋಷಕರು ಸರ್ಕಾರದ ಕೋವಿಡ್-19 ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು**

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103

Scanned with CamScanner